**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಸತ್ರ ಪ್ರಕರಣ ಸಂಖ್ಯೆಃ 46/2023</u>**

ದಿನಾಂಕಃ 10.02.2025
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಪ. -30 ಅ.ಸಾ -14

| | | |
|---|---|---|
| ಹೆಸರು | ಃ | ಶ್ರೀ. ರಾಜು |
| ತಂದೆಯ ಹೆಸರು | ಃ | ನಿಂಗರಾಜೇಗೌಡ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ನುಣ್ಣೂರು |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ಸುಮಾರು ಒಂದು ವರ್ಷದಿಂದ ಮಧ್ಯಾಹ್ನ 1.00 ಗಂಟೆ ಸಮಯಕ್ಕೆ ನಾನು ನುಣ್ಣೂರಿನ ನನ್ನ ತೋಟಕ್ಕೆ ಇನ್‌ಸ್ಪೆಕ್ಟರ್ ಹೋಗುತ್ತಿದ್ದಾಗ ನನ್ನ ಬಳಿ ಈಗ ನಾನು ನೋಡುತ್ತಿರುವ ಸಹಿ ಮಾಡಿಸಿಕೊಂಡಿರುತ್ತಾರೆ. ನಿಪಿ-11 ರಲ್ಲಿನ ಸಾಕ್ಷಿ ಸಹಿಯನ್ನು **ನಿಪಿ-11 ಬಿ** ಎಂದು ಗುರುತಿಸಲಾಯಿತು. ಯಾವುದಕ್ಕೆ ಸಹಿ ಮಾಡಿಸಿಕೊಳ್ಳುತ್ತಿದ್ದಾರೆ ಎಂದು ನಾನು ಕೇಳಲಿಲ್ಲ ಮತ್ತು ಅವರು ಹೇಳಲಿಲ್ಲ. ಈ ಪ್ರಕರಣ ಕುರಿತು ಬೇರೆ ಏನು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಅಭಿಯೋಜಕರು ಕೋರಿರುತ್ತಾರೆ. ವಾದ ಆಲಿಸಿರುತ್ತದೆ. ಪ್ರಕರಣದ ಕಡತವನ್ನು ಪರಿಶೀಲಿಸಿದ್ದು ಸಾಕ್ಷಿ ನಿಪಿ-11, ಮಹಜರ್ ಪ್ರಕಾರ ಸಾಕ್ಷ್ಯ ಹೇಳದೇ ಇರುವುದು ಕಂಡುಬಂದಿದ್ದು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 30.10.2022 ರ ಸಾಯಂಕಾಲ 5.45 ರಿಂದ 6.30 ರವೆರೆಗೆ ನಮ್ಮ ಗ್ರಾಮದ ಮೃತ ಶಿವು @ ರೇಣುಕಾರಾಧ್ಯ ಇವರ ಮನೆ ಬಳಿ ಅಕ್ಕೂರು ಠಾಣೆ ಪೋಲಿಸರು ಮಹಜರ್ ಮಾಡಿದ್ದಕ್ಕೆ ನಾನು ನಿಪಿ-11 ಬಿ ಸಹಿ ಹಾಕಿದ್ದೆ ಎನ್ನುವುದು ಸರಿ ಅಲ್ಲ. ಪೋಲಿಸರ ಜೊತೆಗೆ ಆರೋಪಿ-2 ಇದ್ದು ತಾವು ಮೃತ ಶಿವು ಮೇಲೆ ಹಲ್ಲೆ ಮಾಡಿ ಮೋಟಾರ್ ಸೈಕಲ್ ನಲ್ಲಿ ಕೂರಿಸಿಕೊಂಡು ಹೋದ ಸ್ಥಳ ತೋರಿಸುವುದಾಗಿ ಸ್ವಇಚ್ಛಾ ಹೇಳಿಕೆಯಲ್ಲಿ ಹೇಳಿದ್ದರ ಮೇರೆಗೆ ಆರೋಪಿ-2 ಜಾಗ ತೋರಿಸುವುದಾಗಿ ನಮಗೆ ಹೇಳಿದ್ದು ನಂತರ ಆರೋಪಿ-2 ತೋರಿಸಿದ ಜಾಗದಲ್ಲಿ ಪಂಚನಾಮೆ ಮಾಡಿ ಬರವಣಿಗೆ ಮಾಡಿರುತ್ತದೆ ಎನ್ನುವುದು ಸರಿ ಅಲ್ಲ. ಆರೋಪಿಗಳೊಂದಿಗೆ ಸೇರಿ ಅವರುಗಳಿಗೆ ಶಿಕ್ಷೆ ಆಗುವುದನ್ನು ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

**<u>ಪಾಟೀ ಸವಾಲುಃ ಇಲ್ಲಃ</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.